ಶಶಿಗೆ ಅತ್ತ ಕಡೆ ಮಾತಾಡುತ್ತಿರುವವಳು ಅನು ಎನ್ನಿಸಿಬಿಟ್ಟಿತು.

'ಚೆನ್ನಾಗಿದ್ದೀನಿ ಅನೂ.'

ತನ್ನ ಮಾತು ತನ್ನ ಕಿವಿಗೆ ಬೀಳುತ್ತಿದ್ದಂತೆ ತಪ್ಪಿನ ಅರಿವಾಗಿ ನಾಲಿಗೆ ಕಚ್ಚಿಕೊಂಡ.

'ಚೆನ್ನಾಗಿದ್ದೀನಿ ಅಂದೆನಲ್ಲಪ್ಪಾ.' ಅಮ್ಮ ಬೇರೆ ಥರ ಅರ್ಥ ಮಾಡಿಕೊಂಡಿದ್ದಳು.

ಮೌನ.

'ಹೇಳಮ್ಮ ಏನು ಫೋನ್ ಮಾಡಿದ್ದೂ.'

'ಶಶೀ... ಅದೂ...'

'ಏನಮ್ಮಾ ಅದೂ ಅದೂ ಅಂತಾ ಇದ್ದೀಯಾ. ಹೇಳು ಪರವಾಗಿಲ್ಲ.'

'ಮೊನ್ನೆ ಬಚ್ಚಲಲ್ಲಿ ಬಿದ್ದುಬಿಟ್ಟೆ ಕಣೋ.'

'ಅಯ್ಯಯ್ಯೋ. ಹೌದೇನಮ್ಮಾ? ನನಗೆ ಹೇಳ್ಳೇ ಇಲ್ಲವಲ್ಲಮ್ಮಾ? ತುಂಬಾ ಏಟಾಗಿದೆಯಾ? ಎಲ್ಲೆಲ್ಲಿ ಏಟು ಬಿದ್ದಿದೆ? ಡಾಕ್ಟರ್ ಹತ್ತಿರ ಹೋಗಿದ್ಯಾ ಹೇಗೆ? ಏನಂದರು ಡಾಕ್ಟರೂ? ಈಗ ಹೇಗಿದ್ದೀಯಾ?' ಒಂದೇ ಸಮನೆ ಪ್ರಶ್ನೆಗಳು.

'ನೀನೇನು ಗಾಬರಿ ಆಗಬೇಡಪ್ಪಾ. ಇಲ್ಲೇ ನಾಟಿ ವೈದ್ಯರಿಗೆ ತೋರಿಸಿದ್ದೀನಿ. ಮೂಳೆ ಮುರಿದಿದೆಯಂತೆ. ಅದೇನೋ ಹೇರ್‌ಕ್ರಾಕಂತೆ. ಏನೋ ಪಟ್ಟು ಹಾಕಿದ್ದಾರೆ. ಆದರೆ, ಅದರಿಂದ ಏನೂ ಪ್ರಯೋಜನ ಆಗೋಹಾಗೆ ಕಾಣ್ತಾ ಇಲ್ಲಾ. ಬೆಂಗಳೂರಿಗೆ ಹೋಗಿ ಮೂಳೆ ವೈದ್ಯರಿಗೆ ಒಂದು ಸಲ ತೋರಿಸಿಬಿಟ್ಟರೆ ಒಳ್ಳೇದು ಅಂದರು. ನೋಡು ಶಶಿ, ನಿನಗೆ ಬಿಡುವಿದ್ದರೆ, ಬೇರೆ ಏನೂ ಕೆಲಸ ಇಲ್ಲದಿದ್ದರೆ, ನಾನು ಸೋಮವಾರ ಬರಬೇಕೂಂತ ಇದ್ದೀನಿ. ಒಂದೆರಡು ದಿನ ನೋಡಿಕೋಬೇಕಾಗತ್ತೆ. ನಿನಗೆ ತುಂಬಾ ಕೆಲಸ ಇದ್ದರೇ... ಪರವಾಗಿಲ್ಲಪ್ಪಾ... ಹಾಗೇ ವಾಸಿ ಆಗತ್ತೆ.'

ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡು ಜೋರಾಗಿ ತಲೆಯನ್ನು ಆಡಿಸಿದ –ಏಳೆಂಟುಸಲ. ಕಣ್ಣು ಕತ್ತಲಿಟ್ಟಂತಾಯಿತು.

ಅಮ್ಮ ಹೀಗೆ ಬರ್ತಾ ಇದ್ದಾಳೆ ಅಂತ ಹೇಳಿದರೆ ಸಾಕು, 'ನಿಮ್ಮಮ್ಮ ಬಚ್ಚಲಲ್ಲಿ ಬಿದ್ದು ಕಾಲು ಮುರಕೊಳ್ತಾ ಇರಲಿ, ನಾವು ಕರಕೊಂಡುಬಂದು ಆಸ್ಪತ್ರೆಗೆ ಸೇರಿಸಿ, ಔಷಧಿಗಳನ್ನ ತಂದುಕೊಟ್ಟು, ರಾತ್ರಿಯೆಲ್ಲಾ ಅಲ್ಲಿ ಮಲಗಿದ್ದು, ಆಮೇಲೆ ಮನೇಗೆ ಕರಕೊಂಡುಬಂದು, ಆ ಮುದುಕಿ ಚಾಕರಿ ಮಾಡಿಕೊಂಡಿರಬೇಕು... ನನಗಿನ್ನೇನೂ ಕೆಲಸ ಇಲ್ಲವಾ. ನೋಡೂ, ನೀನು ಬೇಕಾದರೆ ರಜ ಹಾಕಿ ನಿಮ್ಮಮ್ಮನ್ನ ನೋಡಿಕೋ. ನಾನು ನಮ್ಮಮ್ಮನ ಮನೆಗೆ ಹೋಗ್ತೀನಿ' ಅನ್ನೋದು ಗ್ಯಾರಂಟಿ. ನರ್ಸಿಂಗ್ ಹೋಂಗೆ ಸೇರಿಸಿದರೆ ಒಂದು ದಿನಾನಾದರೂ ನಾನು ರಜ ಹಾಕಲೇಬೇಕು. ಮನೆಗೆ ಕರೆದುಕೊಂಡು ಬಂದ ಮೇಲೆ ಅಮ್ಮನನ್ನ ನಾನೇ ನೋಡಿಕೋಬೇಕು. ಆಮೇಲೆ ಚೆಕಪ್‌ಗೆ ಕರಕೊಂಡು ಹೋಗಬೇಕು. ಆಮೇಲೆ ಊರಿಗೆ ಕರಕೊಂಡುಹೋಗಿ ಬಿಟ್ಟುಬರಬೇಕು. ಸೋಮವಾರ ಅಂದರೆ ಹದಿನೆಂಟು. ಮೂವತ್ತರ ಒಳಗೆ ಕೆಲಸ ಮುಗೀಬೇಕು. ಇಲ್ಲದಿದ್ದರೆ ಬಾಸ್ ನನಗೆ ಗೇಟ್ ಪಾಸ್ ಕೊಡೋದು ಗ್ಯಾರಂಟಿ ಅಂತೆಲ್ಲಾ ಲೆಕ್ಕ ಹಾಕಿದ. ಅಮ್ಮನ ಜೊತೆ ಫೋನಲ್ಲಿ ಮಾತಾಡ್ತಾ ಇರೋದೂ ಮರೆತುಹೋಯಿತು. 'ಶಶೀ, ಶಶೀ' ಅಂತ ಅಮ್ಮನ ದನಿ ಕಿವಿ ಮೇಲೆ ಬಿದ್ದಾಗಲೇ ತಾನು ಫೋನ್‌ನಲ್ಲಿರೋದರ ಅರಿವಾದದ್ದು. ತಕ್ಷಣಕ್ಕೆ ಅಮ್ಮನಿಗೆ ಏನು ಹೇಳಬೇಕೆಂದು ಶಶಿಗೆ ತೋಚಲೇ ಇಲ್ಲ. 'ಅಮ್ಮ ಯಾವುದೋ ಫೋನ್ ಬರ್ತಾ ಇದೆ. ನಮ್ಮ ಬಾಸ್ ಕರೀತಾ ಇದ್ದಾರೆ ಅಂತ ಕಾಣತ್ತೆ. ನಾನು ಆಮೇಲೆ ಫೋನ್ ಮಾಡ್ತೀನಮ್ಮ' ಅಂತ